**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಸಿ.ಸಿ. 20/2011**

| | | |
|---|---|---|
| ಹೆಸರು | ಶ್ರೀಮತಿ ಗೌರಮ್ಮ | ಪ್ರಾ.ಸಾ.3 |
| ತಂದೆ/ಗಂಡನ ಹೆಸರು | ರೇಣುಕಪ್ಪ | ಚಾ.ಸಾ.6 |
| ವಯಸ್ಸು | 58 ವರ್ಷ | |
| ಕೆಲಸ | ಅಬಕಾರಿ ನಿರೀಕ್ಷಕರು | ಸಾ.ಪ್ರ.ವ.ಬೋ |
| ವಾಸ | ಹೊಸಕೋಟೆ | ದಿ: 27.01.2023 |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ : –**

ಚಾ.ಸಾ.1ರವರ ಆದೇಶದ ಮೇರೆಗೆ ಮು.ಮ.1 ಮಾದರಿಯನ್ನು ಎಫ್.ಎಸ್.ಎಲ್. ಪರೀಕ್ಷೆಗೆ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿದ್ದು ಪರೀಕ್ಷೆಯ ನಂತರ ವರದಿಯನ್ನು ದಿ:20.10.2010 ರಂದು ತೆಗೆದುಕೊಂಡು ಬಂದಿರುತ್ತೇನೆ. ಸಾಕ್ಷಿ ಎಫ್.ಎಸ್.ಎಲ್. ವರದಿಯನ್ನು ನೋಡಿ ಗುರ್ತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ : –**

ಸದರಿ ದಿನದಂದು ಪ್ರಯೋಗಾಲಯಕ್ಕೆ ಪ್ರಸ್ತುತ ಪ್ರಕರಣದ ಮುದ್ದೆಮಾಲಿನ ಜೊತೆಗೆ ಬೇರೆ ಯಾವ ಪ್ರಕರಣಗಳ ಮಾದರಿಯನ್ನು ತೆಗೆದುಕೊಂಡು ಹೋಗಿ ವರದಿಯನ್ನು ತೆಗೆದುಕೊಂಡು ಬಂದಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ನಾನು ಪರೀಕ್ಷೆಗೆ ಮುದ್ದೆಮಾಲನ್ನು ತಗೆದುಕೊಂಡು ಹೋಗಿದ್ದಕ್ಕಾಗಲೀ, ವರದಿಯನ್ನು ತೆಗೆದುಕೊಂಡು ಬಂದಿದ್ದರ ಕುರಿತಾಗಿ ಆಗಲೀ ನನ್ನ ಸಹಿ ಎಲ್ಲಿಯೂ ಇಲ್ಲ ಎಂದರೆ ಸರಿ. ಮೇಲಧಿಕಾರಿಗಳ ಮಾತು ಕೇಳಿ ಸದರಿ ದಿನ ಕರ್ತವ್ಯದಲ್ಲಿಲ್ಲದಿದ್ದರೂ ಮಾದರಿಯನ್ನು ತೆಗೆದುಕೊಂಡು ಹೋಗದೆ ಇದ್ದರೂ ವರದಿಯನ್ನು ಪಡೆಯದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 20/2011**

| | | |
|---|---|---|
| ಹೆಸರು | ಎನ್. ರಾಜೇಂದ್ರ | ಪ್ರಾ.ಸಾ.2 |
| ತಂದೆ/ಗಂಡನ ಹೆಸರು | ನಂಜುಂಡಾಚಾರ್ | ಚಾ.ಸಾ.5 |
| ವಯಸ್ಸು | 62 ವರ್ಷ | |
| ಕೆಲಸ | ನಿವೃತ್ತ ಅಬಕಾರಿ ನಿರೀಕ್ಷಕರು | ಸಾ.ಪ್ರ.ವ.ಬೋ |
| ವಾಸ | ಮೈಸೂರು | ದಿ: 27.01.2023 |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ : –**

2005 ರಿಂದ 2013ರವರೆಗೆ

ದಿ: 18.10.2010 ರಂದು ಚಾ.ಸಾ.1ರವರಿಗೆ ಬಂದ ಮಾಹಿತಿಯ ಮೇರೆಗೆ ನಂದಗುಡಿ ಹೋಬಳಿ, ದಿನ್ನಹಳ್ಳಿ ಗ್ರಾಮದ ಕೊಂಡ್ರಹಳ್ಳಿ ರಸ್ತೆಯಲ್ಲಿ ಸೇಂದಿ ಮಾರಾಟ ಮಾಡುತ್ತಿದ್ದ ಮಾಹಿತಿಯ ಮೇರೆಗೆ ನಾನು ಚಾ.ಸಾ.1ರವರ ಜೊತೆಗೆ ಸದರಿ ಸ್ಥಳಕ್ಕೆ ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ರಸ್ತೆಯ ಬಲಭಾಗದಲ್ಲಿ ಇದ್ದ ಜಮೀನಿನಲ್ಲಿದ್ದ ಗುಡಿಸಲಿನಲ್ಲಿ ಗುಂಪು ಕಟ್ಟಿದ್ದ ಜನರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಸ್ಥಳವನ್ನು ಪರಿಶೀಲನೆ ಮಾಡಿದಾಗ ಒಬ್ಬ ಆಸಾಮಿ ಇದ್ದು, ಅವರ ಕುರಿತು ವಿಚಾರಿಸಲಾಗಿ ಚನ್ನಿಗಪ್ಪ ಅಲಿಯಾಸ್ ಚನ್ನಿಗಣ್ಣ, ಸಾಲವರಂ ಗ್ರಾಮ, ಸೇಲಂ ಜಿಲ್ಲೆ, ತಮಿಳುನಾಡು ಎಂದು ತಿಳಿಸಿದ್ದು ಸೇಂದಿಯನ್ನು ಮಾರಾಟ ಮಾಡಲು ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ಪಂಚನಾಮೆ ಕ್ರಮವನ್ನು ಮಧ್ಯಾಹ್ನ ಸುಮಾರು 3.30 ರಿಂದ 4.00 ಗಂಟೆಯವರೆಗೆ ಪಂಚರ ಸಮಕ್ಷಮ ಜರುಗಿಸಿ ಸ್ಥಳದಲ್ಲಿದ್ದ ಹಸಿರು ಬಿಂದಿಗೆಯಲ್ಲಿದ್ದ 12ಲೀ. ಸೇಂದಿಯನ್ನು ಅಮಾನತ್ತುಪಡಿಸಿಕೊಂಡು ಅದರ ಪೈಕಿ 1ಲೀ. ಮಾದರಿಯಾಗಿ ಪ್ಲಾಸ್ಟಿಕ್ ಬಾಟಲಿಯಲ್ಲಿ ಸಂಗ್ರಹಿಸಿ ದಾರದಿಂದ ಬಿಗಿಗೊಳಿಸಿ ಮುದ್ದೆಮಾಲು ಮತ್ತು ಆರೋಪಿಯನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ಮಹಜರ್ ಸ್ಥಳದ ಚೆಕ್ಕುಬಂದಿ ಮೂರು ಕಡೆ ಜಮೀನು, ಉತ್ತರಕ್ಕೆ ರಸ್ತೆ ಇರುತ್ತದೆ. ಚಾ.ಸಾ.2 ರಿಂದ 4ರವರು ಸದರಿ ಸಮಯದಲ್ಲಿ ಹಾಜರಿದ್ದರು.

ನಿ.ಪಿ.1 ಮಹಜರ್‌ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1[ಬಿ] ಎಂದು ಗುರ್ತಿಸಲಾಯಿತು. ಮು.ಮ.1ನ್ನು ನೋಡಿ ಗುರ್ತಿಸಿರುತ್ತಾರೆ. ಆರೋಪಿಯನ್ನು ನೊಡಿದರೆ ಗುರ್ತಿಸಬಲ್ಲೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ : –**

ಘಟನೆ ಕುರಿತು ಚಾ.ಸಾ.1ರವರಿಗೆ ಮಾಹಿತಿ ಬಂದಾಗ ಸಮಯ ಮಧ್ಯಾಹ್ನ 2.30 ಗಂಟೆಗೆ ಬಂದಿದ್ದು, ಯಾರು ಮಾಹಿತಿ ಕೊಟ್ಟರು ನನಗೆ ಗೊತ್ತಿಲ್ಲ.ನಾವು ಸದರಿ ದಿನ ಠಾಣೆಯಿಂದ ಮಧ್ಯಾಹ್ನ 3.00 ಗಂಟೆಗೆ ಹೊರಟು ನಂದಗುಡಿ ಮಾರ್ಗವಾಗಿ ನಮ್ಮ ಇಲಾಖಾ ವಾಹನದಲ್ಲಿ ಹೋಗಿದ್ದು, ಸದರಿ ವಾಹನದ ನೋಂ. ಸಂಖ್ಯೆ ನೆನಪಿಲ್ಲ. ಸದರಿ ಸ್ಥಳದಲ್ಲಿ ನಮ್ಮನ್ನು ಮತ್ತು ಆರೋಪಿಯನ್ನು ಹೊರತುಪಡಿಸಿ 10–15 ಜನ ಇದ್ದರು. ನಮ್ಮನ್ನು ನೋಡಿ ಓಡಿಹೋದವರ ಹೆಸರು ಗೊತ್ತಿಲ್ಲ. ಸದರಿ ಸ್ಥಳದ ಮತ್ತು ಗುಡಿಸಲಿನ ಮಾಲೀಕರು, ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಗುಡಿಸಲಿನ

ಛಾಯಾಚಿತ್ರವನ್ನು ತೆಗೆದುಕೊಂಡಿಲ್ಲ. ಸದರಿ ಬಿಂದಿಗೆ ನ್ಯಾಯಾಲಯದ ಮುಂದೆ ಇರುವುದಿಲ್ಲ. ಮು.ಮ.1ರ ಮೇಲೆ ನನ್ನ ಸಹಿ ಇಲ್ಲ. ಸಾಮಾನ್ಯವಾಗಿ ನಾವು ದಾಳಿಗೆ ಹೋಗುವಾಗ ಮು.ಮ.1ರಂತಹ ಬಾಟಲಿಯನ್ನು ತೆಗೆದುಕೊಂಡು ಹೋಗುವ ವಾಡಿಕೆ ಇದೆ ಎಂದರೆ ಸರಿಯಲ್ಲ. ಮೇಲಧಿಕಾರಿಗಳ ಮಾತು ಕೇಳಿ ನಿ.ಪಿ.1ಕ್ಕೆ ಠಾಣೆಯಲ್ಲಿ ಸಹಿ ಮಾಡಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ಥಳದ ಚೆಕ್ಕುಬಂದಿಯಲ್ಲಿರುವ ಜಮೀನುಗಳ ಮಾಲೀಕರು, ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಆರೋಪಿಯ ತಪ್ಪು ಇಲ್ಲದಿದ್ದರೂ ನಮ್ಮ ಠಾಣಾ ಅಂಕಿ–ಅಂಶಕ್ಕಾಗಿ ಪ್ರಕರಣವನ್ನು ಸೃಷ್ಟಿಸಿ ನಿ.ಪಿ.1ಕ್ಕೆ ಸಹಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**